ಹೋಗಿದ್ದಳು. ನಿರ್ಮಲ ಎದ್ದು ಮುಖಕ್ಕೆ ನೀರಾಕಿಕೊಂಡು ಒಂದು ಪ್ಲೇಟ್ ಚಿತ್ರಾನ್ನವನ್ನು ನುಂಗಿ ನೀರು ಕುಡಿದು ಮತ್ತೆ ಹಾಸಿಗೆ ಮೇಲೆ ಬಿದ್ದಳು. ಆದರೆ, ಕೈ ಬೆರಳುಗಳು ಮಾತ್ರ ಮೊಬೈಲ್ ಫೋನ್ ಗುಂಡಿಗಳ ಮೇಲೆ ತೊರೆಯಲ್ಲಿ ಸಣ್ಣ ಮೀನುಗಳು ಪುಟ ಪುಟ ಆಡುವಂತೆ ಬಲು ಚುರುಕಿನಿಂದ ಆಡುತ್ತಿದ್ದವು. ಮೊಬೈಲ್ ಸ್ಕ್ರೀನಿನ ಮೇಲೆ ಅಕ್ಷರಗಳು ನರ್ತಿಸಿದಂತೆಲ್ಲಾ ಅತ್ತೆ ಮುದ್ದನುಮಕ್ಕ ಆಡಿದ್ದ ಕೆಂಡದ ಮಾತುಗಳು ಅವಳನ್ನು ಸುಡಲು ಶುರುವಿಟ್ಟುಕೊಂಡಿದ್ದವು. ಅವಳು ಚಿತ್ರಾನ್ನ ತಿಂದಿದ್ದು ತಂಗ್ಯನಿಗೂ ಸ್ವಲ್ಪ ಸಮಾಧಾನ ತಂದಿತ್ತು. ಅವನೂ ಹೊಟ್ಟೆ ತುಂಬಾ ಚಿತ್ರಾನ ತುಂಬಿಕೊಂಡು ಕಣದ ಕಡೆ ಕಾಲುಕಿತ್ತ. ಆವೊತ್ತು ಸಂಜೆ ಸೂರ್ಯ ಮುಳುಗೋ ಹೊತ್ನಲ್ಲಿ ಕಾಫಿ ಕುಡಿಯುತ್ತಾ ರಂಗಶ್ಯಾಮಣ್ಣನೂ, ''ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ ಇದ್ದಂಗೆ. ಹೆಣ್ಣಿನ ಮುನ್ಸು ಎಂಥ ಮನೇನಾದ್ರೂ ಸುಟ್ಟಾಕಿಬಿಡ್ತೈತೆ. ಯಾವೊತ್ತೂ ತೌರು ಮನೆಗೂ, ಗಂಡನ ಮನೆಗೂ ಹೆಣ್ಣು ಭಾರ ಅನ್ನಿಸಬಾರ್ದು. ಅನುಸರಿಸ್ಕಂಡು ಯಾವ್ ಹೆಣ್ಣು ಬಾಳ್ತಾಳೋ ಅವಳು ಎಲ್ಲೋದ್ರೂ ಒಳ್ಳೆ ಹೆಸರು ತಗಂಬ್ತಾಳೆ.'' ಎಂದು ಸೊಸೆಗೆ ಕೇಳುವಂತೆ ಹಜಾರದಲ್ಲಿ ಕುಂತು ಮಾತನಾಡಿದ್ದ. ರಂಗಶ್ಯಾಮಣ್ಣ ಪ್ರೈಮರಿ ಸ್ಕೂಲು ದಾಟದಿದ್ದರೂ ಒಳ್ಳೆ ಜ್ಞಾನ ಇತ್ತು. ಭಜನೆ ಮಾಡುವುದರಲ್ಲಿ ನಿಸ್ಸೀಮ. ಹರೇದರಲ್ಲಿ ನಡೆದುಕೊಂಡೇ ಒಂದು ಸಾರಿ ಪಂಡರಾಪುರಕ್ಕೆ ಹೋಗಿ ಬಂದಿದ್ದ. ಈಗಲೂ ಕಾರ್ತೀಕ ಮಾಸದಲ್ಲಿ ರಂಗನಾಥಸ್ವಾಮಿ ಗುಡಿಯಲ್ಲಿ ಭಜನೆಗೆ ಕುಂತರೆ ಸರಿಹೊತ್ತಾದರೂ ಸುಸ್ತಾಗದಂತೆ ಭಜನೆ ಮಾಡುತ್ತಾನೆ. ಒಂದ್ನೈವತ್ತಾದರೂ ಭಜನೆ ಪದಗಳು ರಂಗಶ್ಯಾಮಣ್ಣನ ನಾಲಿಗೆಯ ತುದಿಯ ಮೇಲೆಯೇ ಇರಬಹುದು. ರಂಗಶ್ಯಾಮಣ್ಣನ ಮಾತುಗಳನ್ನು ಕೇಳಿಸಿಕೊಂಡ ಮುದ್ದನುಮಕ್ಕ, ''ಓಹೋ ಸಾಕೇಳು ನೀನು ಭಜ್ನೆ ಮಾಡಿದ್ದು. ನಿನ್ನ ಮಾತುಗಳು ಮನುಷ್ಯ ಚರ್ಮದೋರಿಗಾದ್ರೆ ನಾಟ್ತಾವೆ, ಎಮ್ಮೆ ಚರ್ಮದೋರ್ಗೆಲ್ಲಿ ನಾಟ್ತಾವೆ.'' ಎಂದು ರೇಗಿದ್ದಳು. ''ಥೂ, ಭಗವಂತ ಹೆಣ್ಣನ್ನ ಯಾವ ವಿಷ ಘಳಗೇಲಿ ಸೃಷ್ಟಿ ಮಾಡಿದ್ನೋ.'' ಎಂದು ಮನಸ್ಸಿನಲ್ಲೇ ಗೊಣಗಿಕೊಂಡು ಟವಲ್ಲನ್ನು ಹೆಗಲಿಗೇರಿಸಿಕೊಂಡು ಊರ ಮುಂದೆ ಕಡೆ ಹೊರಟ. ''ಸಾಕು ಬಿಡಮ್ಮ ಅತ್ತ. ತಿರ್ಗ ತಿರ್ಗ ಏನ್ ಮಾತಾಡ್ತೀಯ. ಕೇರಿ ಜನ ಏನ್ ಅಂದ್ಕಂಬಲ್ಲ.'' ಎಂದ ತಂಗ್ಯನ ಮಾತಿಗೆ ಮುದ್ದನುಮಕ್ಕ, ''ಓ ನಾನ್ ಕಂಡಿದ್ದಿನೇಳು, ಎಲ್ರು ಮನೆ ದೋಸೇನೂ ತೂತೆ. ನಮ್ಮನೆ ಕಡೆ ಯಾರಾದ್ರೂ ಬೊಟ್ಟು ಮಾಡಿ ತೋರಿಸ್ಲಿ, ಅವರ ಮನೆ ಹೆಂಚೇ ತೂತು ಬಿದ್ದಿರೋದನ್ನ ತೋರಿಸ್ದಿದ್ರೆ ನನ್ನೆಸ್ರು ಮುದ್ದನುಮಕ್ಕನೆ ಅಲ್ಲ.'' ಎಂದು ತಂಗ್ಯನ ಬಾಯನ್ನೂ ಮುಚ್ಚಿಸಿದ್ದಳು. ಆವೊತ್ತು ರಾತ್ರಿಯೂ ನಿರ್ಮಲ ತಂಗ್ಯನಿಗೆ ಬೆನ್ನು ಹಾಕಿಯೇ ಮಲಗಿದ್ದಳು. ಅವನೂ ಅವಳ ಸವಾಸಕ್ಕೆ ಹೋಗದೆ ನಿದ್ರಾದೇವಿಯನ್ನು ತಬ್ಬಿಕೊಂಡ.

ಮಾರನೆಯ ದಿನ ಬೆಳಗ್ಗೆ ಎಂಟೂವರೆ ಗಂಟೆಯಾಗಿತ್ತು. ತಂಗ್ಯನು ತಂಗಳು ಉಂಡು ತೇಗಿ, ಮೂತಿಯನ್ನು ಒರೆಸಿಕೊಂಡು ಹೊರಗೆ ಬರುವುದಕ್ಕೂ ಮನೆಯ ಮುಂದೆ ಕಾರೊಂದು ನಿಲ್ಲುವುದಕ್ಕೂ ಒಂದೇ ಆಗಿತ್ತು. ತಂಗ್ಯನು ನೋಡನೋಡುತ್ತಿದ್ದಂತೆ ಕಾರಿನೊಳಗಿಂದ ಹೆಂಡತಿಯ ತಂದೆ, ತಾಯಿ, ಚಿಕ್ಕಮ್ಮ, ಚಿಕ್ಕಪ್ಪ, ಅಕ್ಕ, ಭಾವ ಇಳಿದಿದ್ದರು. ಎಲ್ಲರ ಮುಖಗಳೂ ಧುಮ ಧುಮ ಧುಮುಗುಡುತ್ತಿದ್ದವು. ತೌರಿನ ವಾಸನೆ ಬಡಿದು ನಿರ್ಮಲ ಹೊಸಿಲು ದಾಟಿ ಬಂದು ಹಟ್ಟಿಮುಂದೆ ಅಮ್ಮನನ್ನು ತಬ್ಬಿಕೊಂಡು ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು. ಮುದ್ದನುಮಕ್ಕ ಮತ್ತು ರಂಗಶ್ಯಾಮಣ್ಣ ಇಬ್ಬರೂ ಒಳಗಿಂದ ಬಂದಿದ್ದರು. ಹುಡುಗಿಯ ಚಿಕ್ಕಮ್ಮ ಮುದ್ದನುಮಕ್ಕನನ್ನು ತಗುಲಿಕೊಂಡಿದ್ದಳು. ''ನೀನು ಮನುಷ್ಯ ಜಾತಿಗುಟ್ಟೋಳೋ ಇಲ್ಲ ರಾಕ್ಷಸ ಜಾತಿಗುಟ್ಟೋಳೋ ಮಾನ್ಗೆಟ್ ಮುಂಡೆ. ಮಗನ್ನ ಒಳಿಕ್ಕಾಕ್ಕಂಡು ನಮ್ಮ ಹುಡ್ಗೀನ ನೀರಾಕ್ಕಂಡಿಲ್ಲ ಅಂತ ಅವಮಾನ ಮಾಡ್ತೀಯಾ. ಮಗನ್ಗೆ ದಿನವೂ ಏಲಕ್ಕಿ ಬುಡ್ಡು ತಿನ್ಸಿ ತಿನ್ಸಿ ಪೌರುಷ ಇಲ್ದಂಗೆ ಮಾಡಿ ನನ್ನ ಮಗಳು ನೀರಾಕ್ಕಂಡಿಲ್ಲ ಅಂತ ಹೇಳ್ತೀಯಂತಲ್ಲ, ಇನ್ನೆಂಥ ಮಾನ್ಗೆಟ್ ಅತ್ತೆ ಇರ್ಬೇಕು ನೀನು. ಪೌರುಷ ಇಲ್ದೋನ್ ಹೆಂಡ್ತಿ